

ತಮಿಳು ಮೂಲ: **ಪಾವಣ್ಣನ್**
ಕನ್ನಡಕ್ಕೆ: **ಕೆ. ನಲ್ಲತಂಬಿ**
ಕಲೆ: ಸಂತೋಷ್ ಸಸಿಹಿತ್ಲು





# ಒಗಟು

ಮಿಂದು ಮುಗಿಸಿ ಇನ್ನೂ ಇರುಳು ಕಳೆಯದಿದ್ದ ಪೂರ್ವ ದಿಕ್ಕನ್ನು ನೋಡಿ “ನಾರಾಯಣ” ಎಂದು ಕ್ಷಣ ಕಣ್ಣು ಮುಚ್ಚಿ ನಮಸ್ಕರಿಸಿದ ನಂತರ ಪೆರಿಯಾಳ್ವಾರ್ ಕೊಳದಿಂದ ದಡಕ್ಕೆ ಹತ್ತಿದರು. ಮಂಜು ಕವಿದಿತ್ತು ಆದರೂ ದೇಹ ಪೂರ್ತಿ ಬಿಸುಪಿರುವುದನ್ನು ಅವರು ಅರಿತರು. ದಡದ ಪಕ್ಕದಲ್ಲಿ ಹೂಗಿಡಗಳು ಚಲನೆಯಿಲ್ಲದೆ ನಿಂತಿದ್ದವು. ಒಂದುಕಡೆ ಹನಿಯ ಮುತ್ತುಗಳನ್ನು ಹೊತ್ತು ಮೌನವಾಗಿ ತಲೆತಗ್ಗಿಸಿದ್ದವು. “ಬಾಳ್ಗೆ, ಬಾಳ್ಗೆ...” ಎಂದು ಗುಣಗುಣಿಸುತ್ತಾ ಮೊದಲ ಹೂವನ್ನು ಕಿತ್ತು ಹೂಬುಟ್ಟಿಗೆ ಹಾಕಿದರು. ಬೆರಳಲ್ಲೂ ಮನಸ್ಸಿನಲ್ಲೂ ಎಂದಿನ ಗೆಲುವು ಕಾಣದಿರುವುದು ಅವರಿಗೆ ಅಚ್ಚರಿಯಾಗಿತ್ತು.

“ಗುರುವೇ... ಒಂದು ಬುಟ್ಟಿ ತುಂಬಿತು” ಎಂದು ಪಶ್ಚಿಮ ದಿಕ್ಕಿನ ತೋಟದಿಂದ ಬಂದು ಒಬ್ಬ ಶಿಷ್ಯ ಹೇಳಿದ. ಪೆರಿಯಾಳ್ವಾರ್ ಅವನನ್ನು ಒಂದು ಕ್ಷಣ ದಿಟ್ಟಿಸಿ ನೋಡಿದರು. “ಓಡಿ ಹೋಗಿ ಆಂಡಾಳ್ ಬಳಿ ಕೊಟ್ಟು ಬಾ” ಎಂದರು. ಆಳ್ವಾರ್ ಅವರ ಕುಟೀರ ಇರುವ ದಿಕ್ಕಿನ ಕಡೆ ಶಿಷ್ಯ ವೇಗವಾಗಿ ನಡೆಯಲು ತೊಡಗಿದ. ಏನೋ ನೆನಪಿಗೆ ಬಂದಂತೆ, “ಸ್ವಲ್ಪ ನಿಲ್ಲು” ಎಂದು ಅವನನ್ನು ನೋಡಿ ಹೇಳಿದರು. ಆ ದನಿ ಕೇಳಿ ನಿಂತ ಶಿಷ್ಯ ಗುರುವಿನ ಮುಖವನ್ನು ನೋಡಿದ. ಅವರು ಹೇಳಲಿರುವ ಮಾತಿಗಾಗಿ ಕಾಯುತ್ತಿದ್ದ. ಪೆರಿಯಾಳ್ವಾರಿನ ಮನಸ್ಸಿನಲ್ಲಿ ಗೊಂದಲ ಮೂಡಿತು. ಕಟ್ಟಿದ ಹೂಮಾಲೆಯನ್ನು ತೊಟ್ಟುಕೊಂಡು ನೀರು ತುಂಬಿದ ತಟ್ಟೆಯಲ್ಲಿ ತನ್ನ ಬಿಂಬವನ್ನು ನೋಡುತ್ತ ನಿಂತ ಆಂಡಾಳಿನ ಆಕಾರ ಮತ್ತೆಮತ್ತೆ ಮನಸ್ಸಿನಲ್ಲಿ ಮೂಡಿತು. ಏನನ್ನೋ ಹೇಳಲು ಅವರ ನಾಲಿಗೆ ತುಡಿಯಿತು. ಹಿಂಜರಿಕೆ ಆ ಮಾತುಗಳನ್ನು ಗಂಟಲ ಕೆಳಗೆ ಒತ್ತಿತು. “ಏನೂ ಇಲ್ಲ ಹೋಗು” ಎಂದು ಹೇಳಿ ಬಗ್ಗಿದರು. ಗೊಂದಲದೊಂದಿಗೆ ಶಿಷ್ಯ ಕುಟೀರದ ಕಡೆ ನಡೆದ.

ಪೆರಿಯಾಳ್ವಾರ್ ನಿಟ್ಟುಸಿರಿನೊಂದಿಗೆ ಮತ್ತೆ ಹೂ ಕೊಯ್ಯಲು ತೊಡಗಿದರು. ಅವರ ಮನಸ್ಸು ಅರಿಯದ ಗೊಂದಲದಿಂದ ಆತಂಕಕ್ಕೆ ಒಳಗಾಯಿತು. ಆಗಾಗ ಎದೆ ಭಾರವಾಯಿತು. ತುಮುಲದಿಂದ ಎದೆ ಬಡಿತ ಹೆಚ್ಚಾಯಿತು. ಗೊಂದಲವನ್ನು ಕೊಡವುವಂತೆ ತಲೆಯನ್ನು ಆಡಿಸಿದರು. ಅರಿವಿಲ್ಲದಂತೆ ಕೈಗಳು ಹೂವನ್ನು ಕೊಯ್ದವು.

